# ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಸುತ್ತೋಲೆ

**ಕೆಯು/ ಉದ್ಯಾನ/ 2025-26/** **ದಿನಾಂಕ:** 28-1-2026

ಕ.ವಿ.ವಿ ಮತ್ತು ಕ.ಸಿ.ಡಿ ಆವರಣದಲ್ಲಿ ಮಾವು ಮತ್ತು ಹುಣಸೆ ಫಸಲುಗಳನ್ನು ಇದ್ದ ಸ್ಥಿತಿಯಲ್ಲಿ ಎರಡನೇ ಬಾರಿ ಟೆಂಡರ್ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ. ವಿವರಣೆ ಈ ಕೆಳಗಿನಂತಿದೆ.

| ಅ.ನಂ | ಫಸಲುಗಳ ವಿವರಣೆ | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ ಹಣ | ಫಸಲು ತೆಗೆದುಕೊಂಡವರು ಕಟ್ಟಬೇಕಾದ ಸುರಕ್ಷಾ ಠೇವಣಿ ಹಣ |
|---|---|---|---|
| 1 | ಇ- ಕ್ವಾರ್ಟರ್ಸ್ ದ ಹತ್ತಿರ ಮಾವು ತೋಟ- 57 | 30000=00 | 2,000=00 |
| 2 | ಕ.ವಿ.ವಿ ಆವರಣದಲ್ಲಿರುವ ಜವಾರಿ ಮಾವು 44 | 1,000=00 | 500=00 |
| 3 | ಕರ್ನಾಟಕ ಕಾಲೇಜು ಮತ್ತು ಇತರೆ ಅಂಗ ಸಂಸ್ಥೆಗಳಲ್ಲಿರುವ ಜವಾರಿ ಮಾವು-23 | 1,000=00 | 500=00 |
| 4 | ಕ.ವಿ.ವಿ ಆವರಣದಲ್ಲಿರುವ ಹುಣಸೆ ಫಸಲು-18 | 15,000=00 | 2,000=00 |
| 5 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿರುವ ಹುಣಸೆ-44 | 30,000=00 | 2,000=00 |

## ಟೆಂಡರ ಕರಾರುಗಳು

1. ಮೇಲೆ ತಿಳಿಸಿದ ಸ್ಥಳದಲ್ಲಿರುವ ಗಿಡಗಳ ಫಸಲುಗಳನ್ನು ಚೆನ್ನಾಗಿ ಗುರುತಿಸಿಕೊಂಡು ಇಷ್ಟವಾದಲ್ಲಿ **FINANCE OFFICER, KARNATAK UNIVERSITY, DHARWAD** ಇವರ ಹೆಸರಲ್ಲಿ ತಾವು ಸಲ್ಲಿಸಲು ಇಚ್ಛಿಸುವ ಫಸಲಿನ ಮುಂದೆ ನಮೂದಿಸಿರುವ ಭಾಗವಹಿಸಲು ಕಟ್ಟಬೇಕಾದ ಹಣದ ಡಿ.ಡಿ ಗಳನ್ನು ಪ್ರತಿ ಫಸಲಿಗೆ ಪ್ರತ್ಯೇಕವಾಗಿ ಡಿ.ಡಿ ಯೊಂದಿಗೆ ತಮ್ಮ ಟೆಂಡರ ದರವನ್ನು ನಿಗದಿತ ಫಾರ್ಮನಲ್ಲಿ ಬರೆದು ಟೆಂಡರ ಡಬ್ಬದಲ್ಲಿ ಹಾಕಬೇಕು. ಟೆಂಡರ ಫಾರ್ಮನ್ನು **ರೂ. 700=00** ಚಲನ್ ಕಟ್ಟಿ ಅದರ ಮೇಲೆ **Rs. 126=00 (18% ಜಿ. ಎಸ್ ಟಿ)** ಹಣವನ್ನು ನಗದು ರೂಪದಲ್ಲಿ ನೀಡಿದ ನಂತರ ಟೆಂಡರ ಫಾರ್ಮ ನೀಡಲಾಗುವದು. ಟೆಂಡರ ಫಾರ್ಮಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೆ ಮರಳಿಸುವದಿಲ್ಲಾ. ಟೆಂಡರನಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಫಾರ್ಮ ಪಡೆಯಲೇಬೇಕು. **ಟೆಂಡರದಾರರು ಕಡ್ಡಾಯವಾಗಿ ಅಧಿಕೃತ ವಿಳಾಸದ ಪುರಾವೆ ಲಗತ್ತಿಸಬೇಕು.**

2. ದಿನಾಂಕ : **13-2-2026** ರಂದು **ಮಧ್ಯಾಹ್ನ 3.00** ಗಂಟೆಯೊಳಗಾಗಿ ಉದ್ಯಾನ ಇಲಾಖೆಯಲ್ಲಿರುವ ಸೀಲು ಮಾಡಿದ ಟೆಂಡರ ಬಾಕ್ಸನಲ್ಲಿ ಹಾಕಬೇಕು ತದನಂತರ ಬಂದವರನ್ನು ಪರಿಗಣಿಸುವದಿಲ್ಲಾ. ಅದೇ ದಿನ **ಮಧ್ಯಾಹ್ನ 3.30** ಗಂಟೆಗೆ ಬಹಿರಂಗ ಹರಾಜು ಏರ್ಪಡಿಸಲಾಗುವದು. ಬಹಿರಂಗ ಹರಾಜು ಮುಗಿದ ನಂತರ ಟೆಂಡರ ಬಾಕ್ಸನಲ್ಲಿರುವ ಮೊಹರಾದ ಟೆಂಡರಗಳನ್ನು ತೆರೆದು ನೋಡಲಾಗುವದು. ಇವೆರಡರಲ್ಲಿ ಯಾರ ಬೆಲೆಯು ಹೆಚ್ಚು ಇರುವದೂ ಅವರಿಗೆ ಫಸಲು ಹರಾಜು ಸಮಿತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಫಸಲುಗಳನ್ನು ನೀಡಲಾಗುವದು.

3. ಟೆಂಡರ/ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಫಸಲು ಪಡೆದವರು ಫಸಲು ಹರಾಜು ಸಮಿತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಫಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ 75% ಹಣವನ್ನು ಮರುದಿನ ಬ್ಯಾಂಕಿನ ಅವಧಿಯೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಅದೇ ವೇಳೆಯಲ್ಲಿ ತಾವು ಕೊಂಡ ಫಸಲುಗಳನ್ನು ಎರಡನೇ ಹೆಚ್ಚಿಗೆ ಬೇಡಿಕೆದಾರರಿಗೆ ನೀಡಬಹುದಾಗಿದೆ.

4. ಟೆಂಡರ ದರಗಳು ಮೇಲಾಧಿಕಾರಿಗಳಿಂದ ಒಪ್ಪಿಗೆ ಪಡೆದ ನಂತರ ಇನ್ನುಳಿದ ಹಣವನ್ನು ತುಂಬಲು ತಿಳಿಸಲಾಗುವದು. ನಿಗದಿತ ಸಮಯದಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಮತ್ತು 75% ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಮೇಲ್ಕಂಡ ಫಸಲುಗಳಿಗೆ ಯೋಗ್ಯ ಬೆಲೆ ಬಾರದಿದ್ದರೆ ಟೆಂಡರ/ಬಹಿರಂಗ ಹರಾಜು ದರವನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.

5. ಟೆಂಡರನಲ್ಲಿ ಭಾಗವಹಿಸಿ, ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಫಸಲಿನ ಹಣವನ್ನು ಸಂಪೂರ್ಣವಾಗಿ ತುಂಬಿ ಫಸಲು ತೆಗೆದುಕೊಂಡು ಹೋಗುವ ಅನುಮತಿ ಪಡೆದ ನಂತರವೂ ಫಸಲು ವಿಲೇವಾರಿಗೆ ಏನಾದರು ಸಮಸ್ಯೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.

6. ಫಸಲುಗಳನ್ನು ತೆಗೆಯುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ವಿಶ್ವವಿದ್ಯಾಲಯ ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ವಿಶ್ವವಿದ್ಯಾಲಯದ ಆಡಳಿತಾಧಿಕಾರಿಗಳು ನಿಗದಿ ಪಡಿಸುವ ಹಣವನ್ನು ತಾವೇ ತುಂಬಿ ಕೊಡಬೇಕು. ಫಸಲುಗಳನ್ನು ತೆಗೆದುಕೊಂಡವರು ಫಸಲಿನ ಔಷಧ ಉಪಚಾರಾ, ನೀರು ಹಾಕುವದು, ಗಿಡಗಳ ಸಂರಕ್ಷಣೆ ಮತ್ತು ಇತ್ಯಾದಿಗಳನ್ನು ಫಸಲು ತೆಗೆದುಕೊಂಡವರು ತಮ್ಮ ಸ್ವಂತ ಖರ್ಚಿನಿಂದ ತಾವೇ ಮಾಡಿಕೊಳ್ಳಬೇಕು. ಫಸಲು ತೆಗೆದುಕೊಂಡವರು ಫಸಲನ್ನು ಅಂದರೆ ಕಾಯಿಗಳನ್ನು ಮತ್ತು ಹಣ್ಣುಗಳನ್ನು ಮಾತ್ರ ಕಟಾವು ಮಾಡಿಕೊಳ್ಳಬೇಕು ಮತ್ತು ಗಿಡಗಳ ತೋಟದ ಪಕ್ಕದಲ್ಲಿರುವ ಯಾವುದೇ ಗಿಡಗಳನ್ನು ಮುಟ್ಟತಕ್ಕದಲ್ಲಾ. ಫಸಲುಗಳಿಂದ ಲಾಭವಾಗಲಿ ಅಥವಾ ಹಾನಿಯಾಗಲಿ ಅದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರವಾಗಿರುವುದಿಲ್ಲಾ. ವಿಶ್ವವಿದ್ಯಾಲಯದ ಅನುಮತಿ ಆದೇಶ ಪಡೆಯದೆ ಫಸಲು ಕಟಾವು ಮಾಡುವಂತಿಲ್ಲಾ.

7. ಟೆಂಡರ ನಡೆಯುವಾಗ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರು ತೊಂದರೆಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ದಲ್ಲಿ ಕಛೇರಿ ವೇಳೆಯಲ್ಲಿ ವಿಚಾರಿಸಬಹುದು. ಮೊ. ನಂ. 8762270302

Digitally signed by
SHANKAREPPA LINGANNA VANIKYAL
Date: 28.01.2026 17:36:48
**ಕುಲಸಚಿವರು**

Scanned with OKEN Scanner